ಸಣ್ ಸುದ್ದಿ

ಕಾರಹುಣ್ಣಿಮೆ ಪ್ರಯುಕ್ತ ವಿಶೇಷವಾದ ಪೂಜೆ

ಹಿರಿಯೂರು: ನಗರದ ಹೃದಯ ಭಾಗದಲ್ಲಿರುವ ಪುರಾತನ ಕಾಲದ ಸುಪ್ರಸಿದ್ಧ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ ನಡೆಸಲಾಯಿತು. ಮಾತೆಗೆ ಗಂಧದ ಅಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಕುಂಕುಮಾರ್ಚನೆ, ಹೂವಿನ ಅಲಂಕಾರ ಹಾಗೂ ನೈವೇದ್ಯ ಸಮರ್ಪಣೆ ನಂತರ ಲೋಕ ಕಲ್ಯಾಣಾರ್ಥವಾಗಿ ವಿಶೇಷ ಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಅನೇಕ ಭಕ್ತರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪರಿಸರ ದಿನಾಚರಣೆ

ಚಿತ್ರದುರ್ಗ: ನಗರದ ಎಸ್‌ಜೆಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ರಾಷ್ಟ್ರೀಯ ಸೇವಾಯೋಜನೆ ಘಟಕ, ರೋಟರಿ ಕ್ಲಬ್ ಚಿನ್ಮೂಲಾದ್ರಿ ಮತ್ತು ಎಸ್‌ಜೆಎಂ ತಾಂತ್ರಿಕ ಮಹಾವಿದ್ಯಾಲಯ ಸಹಯೋಗದೊಂದಿಗೆ 75ನೇ ಸ್ವಾತಂತ್ರ್ಯದ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ವಿಶ್ವಪರಿಸರ ದಿನದ ಅಂಗವಾಗಿ ಎಸ್‌ಜೆಎಂ ವಿಶ್ವವಿದ್ಯಾಲಯ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಚಾರ್ಯ ಡಾ. ಎಲ್. ಈಶ್ವರಪ್ಪ, ಎಸ್‌ಜೆಎಂ ತಾಂತ್ರಿಕ ಮಹಾವಿದ್ಯಾಲಯದ ಪ್ರಭಾರ ಪ್ರಾಚಾರ್ಯ ಕುಮಾರಸ್ವಾಮಿ, ರೋಟರಿಕ್ಲಬ್ ಚಿನ್ಮೂಲಾದ್ರಿ ಅಧ್ಯಕ್ಷ ಎನ್. ಚಲುವರಾಜು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರೊ. ಶ್ರೀಶೈಲ, ಗಾಯತ್ರಿ ಶಿವರಾಮ್, ನಾಗರಾಜ ಸಂಗಂ, ಅರುಣ್ ಕುಮಾರ್, ಕಿರಣ್‌ಶಂಕರ್, ಶಂಕ್ರಪ್ಪ, ರಂಗಪ್ಪ, ಲವಕುಮಾರ್, ವಿಶಾಲಾಕ್ಷಿ, ಲೋಕೇಶ್ ಭಾಗವಹಿಸಿದ್ದರು.

ನಾಳೆ ಕೊಳೆಗೇರಿ ಸಂಘಟನೆ ಸಭೆ

ಚಿತ್ರದುರ್ಗ: ಕರ್ನಾಟಕ ಕೊಳೆಗೇರಿ ನಿವಾಸಿಗಳ ಸಂಯುಕ್ತ ಸಂಘಟನೆಯಿಂದ ಜೂ.16 ರಂದು ಬೆಳಗ್ಗೆ 11.30ಕ್ಕೆ ನಗರದ ರೋಟರಿ ಬಾಲಭವನದ ಮುಂಭಾಗದಲ್ಲಿರುವ ಪಾರ್ಕ್‌ನಲ್ಲಿ ಸಭೆ ಕರೆಯಲಾಗಿದೆ. ನಗರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೊಳೆಗೇರಿ ನಿವಾಸಿಗಳು, ಬಡವರು, ಕೂಲಿ ಕಾರ್ಮಿಕರು, ಸ್ವಂತ ನಿವೇಶನ, ಮನೆ ಇಲ್ಲದವರು ಹಾಗೂ ಮಧ್ಯಮ ವರ್ಗದವರು ಸಭೆಯಲ್ಲಿ ಭಾಗವಹಿಸುವಂತೆ ಸಂಘಟನೆ ಜಿಲ್ಲಾಧ್ಯಕ್ಷ ಗಣೇಶ್ ಕೋರಿದ್ದಾರೆ.

ಹಿರಿಯೂರಿನಲ್ಲಿ ಧಾರಾಕಾರ ಮಳೆ

ಹಿರಿಯೂರು: ಮಂಗಳವಾರ ಹಿರಿಯೂರಿನಲ್ಲಿ ಧಾರಾಕಾರ ಮಳೆ ಸುರಿದಿದ್ದು ತಗ್ಗಿನ ಪ್ರದೇಶಗಳಿಗೆ ನೀರು ನುಗ್ಗಿದೆ. ಸಂಜೆ 4-30ರ ಸುಮಾರಿಗೆ ಆರಂಭವಾದ ಮಳೆ ಒಂದು ತಾಸಿಗೂ ಹೆಚ್ಚು ಕಾಲ ಸುರಿಯಿತು. ಚರಂಡಿಗಳು ಭೋರ್ಗರೆದವು. ಮಳೆಗೆ ರಸ್ತೆಗಳೆಲ್ಲಾ ಜಲಾವೃತಗೊಂಡಿದ್ದು ಬೆಂಗಳೂರು- ದಾವಣಗೆರೆ ರಸ್ತೆಯ ನಗರ ಪ್ರವೇಶಿಸುವ ರಾಷ್ಟ್ರೀಯ ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆ ಮೇಲೆ ಅರ್ಧ ಮೀಟರ್ ಎತ್ತರ ನೀರು ಹರಿದಿದ್ದರಿಂದ ವಾಹನ ಸವಾರರು ಪರದಾಡುವಂತಾಯಿತು. ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರ ಓಮ್ನಿ ವಾಹನ ನಡು ನೀರಲ್ಲೇ ನಿಂತು ಮಹಿಳೆಯರೇ ಇಳಿದು ತಳ್ಳುವಂತಾಯಿತು. ಸುಮಾರು ಒಂದು ಗಂಟೆ ಬಂದ ಬಿರುಸಿನ ಮಳೆಗೆ ಬೈಕ್, ಆಟೋ ಸವಾರರು ನೀರಲ್ಲೇ ವಾಹನ ಚಲಾಯಿಸಿ ಹೋಗುವಂತಾಯಿತು. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

- ತಗ್ಗಿನ ಪ್ರದೇಶಗಳಿಗೆ ನುಗ್ಗಿದ ನೀರು

ನಿಂಗಪ್ಪ ನಿಧನ

ಸಿರಿಗೆರೆ: ಸಿರಿಗೆರೆ ನಾರದಮುನಿ ದೇವಾಲಯದ ಅರ್ಚಕರಾಗಿ ದೀರ್ಘ ಕಾಲದಿಂದ ಸೇವೆ ಸಲ್ಲಿಸಿದ್ದ ಎನ್. ನಿಂಗಪ್ಪ (90) ಸೋಮವಾರ ತಡ ರಾತ್ರಿ ನಿಧನರಾದರು. ದೇವ ಸನ್ನಿಧಿಯ ಸೇವೆ ಸಲ್ಲಿಸುತ್ತಲೇ ಜನರಿಗೆ ಚಿರಪರಿತರಾಗಿದ್ದ ಶ್ರೀಯುತರಿಗೆ ಪತ್ನಿ ಹಾಗೂ ಪತ್ರಕರ್ತ ಸಿರಿಗೆರೆ ಚಿಕ್ಕೇಶ್ ಸೇರಿ ಮೂವರು ಪುತ್ರರು ಇದ್ದಾರೆ. ಮಂಗಳವಾರ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

18ರ ಸಮಾವೇಶದಲ್ಲಿ 10 ಸಾವಿರ ಸದಸ್ಯರು ಭಾಗಿ

ಸಚಿವ ಬಿ.ಶ್ರೀರಾಮುಲು ಮಾಹಿತಿ | ಅನುಭವ ಮಂಟಪದಲ್ಲಿ ಸ್ಥಳೀಯ ಸಂಸ್ಥೆಗಳ ಬಿಜೆಪಿ ಬೆಂಬಲಿತ ಸದಸ್ಯರ ಸಮಾವೇಶ

18ರಂದು ಚಿತ್ರದುರ್ಗಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ಸಿಎಂ ಬಸವರಾಜ ಬೊಮ್ಮಾಯಿ ಸೇರಿ ಹಲವು ನಾಯಕರು ದೌಡು

- **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಗ್ರಾಮೀಣ ಮತ್ತು ನಗರಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಬೆಂಬಲಿತ ಸದಸ್ಯರ ಸಮಾವೇಶವು ಜೂನ್ 18 ರಂದು ಚಿತ್ರದುರ್ಗದಲ್ಲಿ ಆಯೋಜಿಸಲಾಗಿದ್ದು ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಆಗಮಿಸಲಿದ್ದಾರೆಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನೇಕ ಜನಪರ ಯೋಜನೆಗಳನ್ನು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮನೆ ಮನೆಗೆ ತಲುಪಿಸುವ ಉದ್ದೇಶದಿಂದ ಸಮಾವೇಶ ಆಯೋಜಿಸಲಾಗಿದೆ. ಮುರುಘಾಮಠದ ಅನುಭವ ಮಂಟಪದಲ್ಲಿ ನಡೆಯಲಿರುವ ಸಮಾವೇಶವನ್ನು ಜೆ.ಪಿ.ನಡ್ಡಾ ಉದ್ಘಾಟಿಸಲಿದ್ದಾರೆ ಎಂದರು.

ಹಲವು ಗಣ್ಯರು ಭಾಗಿ: ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿರುವ ಬಿಜೆಪಿ ಬೆಂಬಲಿತ ಸದಸ್ಯರುಗಳನ್ನುದ್ದೇಶಿಸಿ ಅಂದು ಸಂಜೆ ನಾಲ್ಕು ಗಂಟೆಗೆ ನಡ್ಡಾ ಭಾಷಣ ಮಾಡಲಿದ್ದಾರೆ. ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಂಸದರು, ಸಚಿವರು, ಶಾಸಕರು ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಬೀದರ್, ಕಲ್ಬುರ್ಗಿ, ಕೊಪ್ಪಳ, ಶಿವಮೊಗ್ಗ, ಮಂಡ್ಯ ಹಾಗೂ ಕರಾವಳಿ ಪ್ರದೇಶಗಳಿಂದ ಹತ್ತು ಸಾವಿರ ಸದಸ್ಯರು ಸಮಾವೇಶಕ್ಕೆ ಆಗಮಿಸಲಿದ್ದು, ಅಗತ್ಯ ಸಿದ್ಧತೆಗಳು ನಡೆದಿವೆ. ಸಮಾವೇಶವ ಅಚ್ಚುಕಟ್ಟಾಗಿ ನಿರ್ವಹಿಸಲು ಕಾರ್ಯಕರ್ತರುಗಳಿಗೆ ಜವಾಬ್ದಾರಿ ನೀಡಲಾಗಿದೆ ಎಂದರು.

ಯೋಜನೆ ವಿಳಂಬವಾಗುವ ಬಗ್ಗೆ ನಡ್ಡಾಗೆ ಮನವಿ: ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಮಾತನಾಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪ್ರಥಮ ಬಾರಿಗೆ ಚಿತ್ರದುರ್ಗಕ್ಕೆ ಆಗಮಿಸುತ್ತಿದ್ದು, ಬಯಲುಸೀಮೆ ಚಿತ್ರದುರ್ಗ ಜಿಲ್ಲೆಗೆ ಬೇಕಾಗಿರುವ ಪ್ರಮುಖ ಯೋಜನೆಗಳಾದ ಭದ್ರಾ ಮೇಲ್ದಂಡೆ ಹಾಗೂ ತುಮಕೂರು- ಚಿತ್ರದುರ್ಗ - ದಾವಣಗೆರೆ ನೇರ ರೈಲು ಮಾರ್ಗ ಯೋಜನೆ ವಿಳಂಬವಾಗುತ್ತಿರುವುದನ್ನು ನಡ್ಡಾರವರಿಗೆ ತಿಳಿಸುವ ಮೂಲಕ ಪ್ರಧಾನಿ ಮೋದಿರವರ ಗಮನ ಸೆಳೆಯಲಾಗುವುದೆಂದು ಹೇಳಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೈಪಾಲ್, ಚಿತ್ರದುರ್ಗ ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ಜಿ.ಟಿ.ಸುರೇಶ್‌ಸಿದ್ದಾಪುರ, ಡಾ.ಸಿದ್ದಾರ್ಥ, ಅನಿತ್ ಸಿದ್ದೇಶ್ವರ, ಪಾಪೇಶ್‌ನಾಯಕ, ಸಿಂಧು, ನವೀನ್ ಚಾಲುಕ್ಯ, ತುಮಕೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿ, ಮಧುಗಿರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಬಿ.ಕೆ. ಮಂಜುನಾಥ್, ವಕ್ತಾರ ನಾಗರಾಜ್‌ಬೇದ್ರೆ, ಜಿಲ್ಲಾ ಮಾಧ್ಯಮ ವಕ್ತಾರ ದಗ್ಗೆಶಿವಪ್ರಕಾಶ್ ಸುದ್ದಿಗೋಷ್ಠಿಯಲ್ಲಿದ್ದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಚಿತ್ರದುರ್ಗಕ್ಕೆ ಆಗಮಿಸುತ್ತಿರುವ ಹಿನ್ನಲೆ ಸಾರಿಗೆ ಸಚಿವ ಶ್ರೀರಾಮುಲು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

> ಸ್ಥಳೀಯ ಸಂಸ್ಥೆಗಳಿಂದ ಗೆದ್ದಿರುವ ಬಿಜೆಪಿ ಬೆಂಬಲಿತ ಜನಪ್ರತಿನಿಧಿಗಳ ಸಮಾವೇಶದ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಾಂಕ್ಷಿ ಯೋಜನೆಗಳನ್ನು ಕಟ್ಟ ಕಡೆಯ ವ್ಯಕ್ತಿಗೆ ತಲುಪಿಸುವುದು ಸಮಾವೇಶದ ಉದ್ದೇಶ. ಸಮಾವೇಶಕ್ಕೆ ರಾಜ್ಯದ ನಾಲ್ಕು ದಿಕ್ಕುಗಳಿಂದ ಆಗಮಿಸುವವರನ್ನು ಸತ್ಕರಿಸುವುದಕ್ಕಾಗಿ 35 ವಿಭಾಗಗಳನ್ನು ರಚಿಸಲಾಗಿದೆ.
>
> • **ಎ.ಮುರಳಿ,** ಬಿಜೆಪಿ ಜಿಲ್ಲಾಧ್ಯಕ್ಷ

ಇಡಿ ವಿಚಾರಣೆಯ ನೋವು ಕಾಂಗ್ರೆಸ್‌ನವರಿಗೂ ಗೊತ್ತಾಗಲಿ

ರಾಹುಲ್ ಇಡಿ ವಿಚಾರಣೆಗೆ ಸಚಿವ ಶ್ರೀರಾಮುಲು ಪ್ರತಿಕ್ರಿಯೆ

- **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಕಾನೂನು ಎಲ್ಲರಿಗೂ ಒಂದೇ ಆಗಿದ್ದು ಅದು ರಾಹುಲ್ ಗಾಂಧಿ ಹೊರತಾಗಿಲ್ಲ. ಇಡಿ ವಿಚಾರಣೆ ನೋವು ಏನು ಅಂತ ಕಾಂಗ್ರೆಸ್‌ನವರಿಗೂ ಗೊತ್ತಾಗಲಿ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಕಾಂಗ್ರೆಸ್‌ನವರು ಇದುವರೆಗೂ ಜನರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಿ ಕಾಟ ಕೊಟ್ಕಂಡು ಬರ್ತಿದ್ದರು. ಕಾಲಚಕ್ರದಲ್ಲಿ ಒಬ್ಬರು ಕೆಳಗೆ ಬೀಳಬೇಕು, ಒಬ್ಬರು ಮೇಲೇರಬೇಕು. ಇವತ್ತು ಕಾಲಚಕ್ರದಲ್ಲಿ ಬಿಜೆಪಿ ಮೇಲುಗೈ ಆಗಿದೆ. ಕಾಂಗ್ರೆಸ್ ನವರಿಗೆ ಕೆಳಗೆ ಇಳಿಯಲು ಆಗುತ್ತಿದೆ. ಇರೋಕೆಟ್ಟಪರಿಸ್ಥಿತಿ ಬಂದಿದೆ. ಇದು ರಿವೇಂಜ್ ಅಲ್ಲ. ಹಳೇಹಗರಣ ಕಾಂಗ್ರೆಸ್ ಎದುರಿಸುತ್ತಿದ್ದು ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ಬಿಜೆಪಿ ಯಾವತ್ತೂ ರಿವೇಂಜ್ ಪಾಲಿಟಿಕ್ಸ್ ಮಾಡಿಲ್ಲವೆಂದರು.

ಇಡಿ, ಐಟಿಯನ್ನು ಬಿಜೆಪಿ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಬಿಡಲಿ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಶ್ರೀರಾಮುಲು ಅನುಭವ ಇರುವ ರಾಜಕಾರಣಿಗಳು ಐಟಿ, ಇಡಿ ಬಗ್ಗೆ ಮಾತನಾಡ್ತಾರೆ ಅಂದ್ರೆ ಇತಿಹಾಸ ಮರೆತಿರಬೇಕು ಅನ್ನಿಸುತ್ತೆ ಎಂದು ವ್ಯಂಗ್ಯವಾಡಿದರು.

ಬಾಳೆಹಣ್ಣು ವ್ಯಾಪಾರಿ ನಿತಿನ್‌ಗೆ ಹಲ್ಲೆ

9 ಮಂದಿ ವಿರುದ್ಧ ಪ್ರಕರಣ ದಾಖಲು | ಆರೋಪಿಗಳ ವಶಕ್ಕೆ ಪಡೆದು ವಿಚಾರಣೆ

ಚಳ್ಳಕೆರೆ: ನಗರದ ಪಾವಗಡ ರಸ್ತೆಯಲ್ಲಿ ಸೋಮವಾರ ರಾತ್ರಿ ಪಾವಗಡ ರಸ್ತೆಯಲ್ಲಿ ವಾಯುವಿಹಾರ ನಡೆಸುತ್ತಿದ್ದ ಬಿಕಾಂ ವಿದ್ಯಾರ್ಥಿ, ಬಾಳೆಹಣ್ಣಿನ ವ್ಯಾಪಾರಿ ನಿತಿನ್ (27) ಎಂಬುವರ ತಡೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಪ್ರಾಣ ಬೆದರಿಕೆ ಹಾಕಿ ಅವರ ಮನೆಗೂ ನುಗ್ಗಿ ಕೊಲ್ಲುವ ಯತ್ನ ಮಾಡಿದ 9 ಮಂದಿ ಮೇಲೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಇಲ್ಲಿನ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ರಾಮದಾಸ್‌ರ ಪುತ್ರ ನಿತಿನ್ ಬಿಕಾಂ ಪದವಿ ನಂತರ ಬಾಳೆಹಣ್ಣಿನ ಮಂಡಿಯಲ್ಲಿ ವ್ಯಾಪಾರ ಮಾಡುತ್ತಿದ್ದು ಸೋಮವಾರ ರಾತ್ರಿ ತನ್ನ ಸಹೋದರ ಲಿಂಗರಾಜು ಸ್ನೇಹಿತರಾದ ಬಸವಕಿರಣ, ಸುಧಾಕರರೊಂದಿಗೆ ವಾಕಿಂಗ್ ವೇಳೆ ಕಾಟಪ್ಪನಹಟ್ಟಿಯ ಆಕಾಶ್, ಉಮೇಶ್, ವಿಜಯ್, ವಸಂತ, ಸುರೇಶ್, ಮಂಜು, ಭರತೇಶ್, ತಿಪ್ಪೇಸ್ವಾಮಿ, ಭರತ್‌ಕುಮಾರ್ ಎಂಬುವವರು ನಾವು ಮಾತನಾಡಿಸಿದರೂ ನೀನು ಉತ್ತರ ನೀಡದೆ ದುರಹಂಕಾರದಿಂದ ವರ್ತಿಸುತ್ತಿಯ ಎಂದು ಮನಬಂದಂತೆ ಅವಾಚ್ಯ ಶಬ್ದದಿಂದ ನಿಂದಿಸಿ, ಕಲ್ಲುಗಳಿಂದ ಆತನ ತಲೆ, ಮೈ ಕೈಗೆ ಹೊಡೆದು ಗಾಯಗೊಳಿಸಿದ್ದಾರೆ. ಇವರ ಜೊತೆಗಿದ್ದ ಸ್ನೇಹಿತರು ಜಗಳ ಬಿಡಿಸಿ ನಿತಿನ್‌ನ್ನು ಮನೆಗೆ ಕರೆತಂದಿದ್ದಾರೆ. ಆದರೆ ಮತ್ತೆ ಮನೆಗೆ ನುಗ್ಗಿ ಮನೆಯಲ್ಲಿದ್ದ ಅವನನ್ನು ಹೊರಗೆ ಎಳೆತಂದು ಹಲ್ಲೆ ನಡೆಸಿ ಬೆದರಿಕೆ ಹಾಕಿದ್ದಾರೆ. ಕೂಡಲೇ ಆಕೆಯ ತಾಯಿ ನೆರೆಹೊರೆಯವರು ನಿತಿನ್‌ನ್ನು ರಕ್ಷಿಸಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪ್ರಾಣ ಬೆದರಿಕೆ ಹಾಕಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಿತಿನ್ ಪೊಲೀಸರಿಗೆ ಮನವಿ ಮಾಡಿದ್ದಾನೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಡಿವೈಎಸ್ಪಿ ಕೆ.ವಿ.ಶ್ರೀಧರ್ ಕಾಟಪ್ಪನಹಟ್ಟಿಗೆ ತೆರಳಿ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ನಿತಿನ್ ಮೇಲೆ ಹಲ್ಲೆ ನಡೆಸಿ ಪ್ರಾಣ ಬೆದರಿಕೆ ಹಾಕಿದ 9 ಜನರ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ನಿತಿನ್ ಹಲ್ಲೆ ಪ್ರಕರಣದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಭರವಸೆ

ಚಳ್ಳಕೆರೆ ಕಳ್ಳತನ ಪ್ರಕರಣಗಳ ನಿಯಂತ್ರಣಕ್ಕೆ ಒತ್ತು: ಎಸ್ಪಿ ಪರಶುರಾಮ್

ಡಿವೈಎಸ್ಪಿ ಕೆ.ವಿ.ಶ್ರೀಧರ್ ವಿರುದ್ದ ಸೂಕ್ತ ಕ್ರಮ ಜರುಗಿಸಬೇಕೆಂದು ಜಿಲ್ಲಾ ರಕ್ಷಣಾಧಿಕಾರಿ ಕೆ.ಪರಶುರಾಮ್‌ಗೆ ಮನವಿ ಸಲ್ಲಿಸಲಾಯಿತು.

ಚಳ್ಳಕೆರೆ ನಗರದ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಕಾಟಪ್ಪನಹಟ್ಟಿಯ ಜನರು ಪ್ರತಿಭಟನೆ ನಡೆಸಿದರು.

ಚಳ್ಳಕೆರೆ: ನಗರದ ಪಾವಗಡ ರಸ್ತೆಯಲ್ಲಿ ವಾಕಿಂಗ್ ನಡೆಸುತ್ತಿದ್ದ ಬಾಳೆಹಣ್ಣಿನ ವ್ಯಾಪಾರಿ ನಿತಿನ್(27) ಪ್ರಾಣಬೆದರಿಕೆ ಹಾಗೂ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಇಲಾಖೆಯಿಂದ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಂಡಿದ್ದು, ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಜಿಲ್ಲಾ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

ಮಂಗಳವಾರ ಪೊಲೀಸ್ ಠಾಣೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಹಲ್ಲೆಗೆ ಸಂಬಂಧಿಸಿ ಸೋಮವಾರ ರಾತ್ರಿಯೇ ಪೊಲೀಸರು ಹಲ್ಲೆಗೈದ ಆರೋಪಿಗಳನ್ನು ಪತ್ತೆಹಚ್ಚುವ ಸಲುವಾಗಿ ಕಾಟಪ್ಪನಹಟ್ಟಿಗೆ ಭೇಟಿ ನೀಡಿ ಹಲ್ಲೆಗೈದವರನ್ನು ವಶಕ್ಕೆ ಪಡೆಯಲು ಪ್ರಾಮಾಣಿಕ ಯತ್ನ ನಡೆಸಿದ್ದಾರೆ. ಆದರೆ, ಹಲ್ಲೆಗೆ ನಿರ್ದಿಷ್ಟ ಕಾರಣ ತಿಳಿದು ಬಂದಿಲ್ಲ. ಗಾಯಾಳು ನಿತಿನ್‌ರವರ ಹೇಳಿಕೆಯಂತೆ ಆರೋಪಿಗಳನ್ನು ವಶಕ್ಕೆ ಪಡೆಯಲಾಗುವುದು ಎಂದರು.

ಈ ಮಧ್ಯೆ ಇಲ್ಲಿನ ಕಾಟಪ್ಪನಹಟ್ಟಿಯಲ್ಲಿ ಆರೋಪಿಗಳನ್ನು ವಶಕ್ಕೆ ಪಡೆಯುವ ಸಂದರ್ಭದಲ್ಲಿ ಉಪವಿಭಾಗದ ಡಿವೈಎಸ್ಪಿಯವರು ಮನೆಗಳಿಗೆ ನುಗ್ಗಿ ಮಹಿಳೆಯರನ್ನು ಥಳಿಸಿ ಆರೋಪಿಗಳ ನಡುರಸ್ತೆಯಲ್ಲೇ ಹಿಗ್ಗಾಮುಗ್ಗಾ ಹೊಡೆದರಲ್ಲದೆ, ಮಹಿಳೆಯರಿಗೆ ಅವಾಚ್ಯ ಶಬ್ದಗಳಿಂದ ನಿಂತಿಸಿದ್ದಾರೆಂದು ಆರೋಪಿಸಿ ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಆದರೆ, ಈ ಬಗ್ಗೆ ಲಿಖಿತ ದೂರು ನೀಡಿದಲ್ಲಿ ಮಾತ್ರ ನಿಷ್ಪಕ್ಷವಾದ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸದ್ಯ ಕಾಟಪ್ಪನಹಟ್ಟಿ ಶಾಂತಾವಾಗಿದ್ದು ಇಂತಹ ಘಟನೆಗಳು ನಡೆಯದಂತೆ ಇಲಾಖೆ ಎಚ್ಚರಿಕೆ ವಹಿಸಲಾಗುವದೆಂದರು.

ಫಸಲ್ ಬಿಮಾ: ₹82 ಕೋಟಿ ಬಿಡುಗಡೆ

ಕೃಷಿ ಅಭಿಯಾನ ಪ್ರಚಾರ ವಾಹನಕ್ಕೆ ಚಾಲನೆ ನೀಡಿದ ಶಾಸಕ ತಿಪ್ಪಾರೆಡ್ಡಿ

ಚಿತ್ರದುರ್ಗದ ಪ್ರವಾಸಿ ಮಂದಿರದ ಆವರಣದಲ್ಲಿ ಮಂಗಳವಾರ ಕೃಷಿ ಅಭಿಯಾನ ಪ್ರಚಾರ ವಾಹನಕ್ಕೆ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಚಾಲನೆ ನೀಡಿದರು. ಜಂಟಿ ಕೃಷಿ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಇದ್ದಾರೆ.

- **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಜಿಲ್ಲೆಗೆ ರು.82 ಕೋಟಿ ಬಿಡುಗಡೆಯಾಗಿದ್ದು, ಈಗಾಗಲೇ ನೇರವಾಗಿ ರೈತರ ಖಾತೆಗೆ ಹಣ ವರ್ಗಾವಣೆಯಾಗಿದೆ ಎಂದು ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಮಂಗಳವಾರ ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಎಂಬ ಶೀರ್ಷಿಕೆಯಡಿ ಕೃಷಿ ಅಭಿಯಾನ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿ ವಿಮೆ ಬರುತ್ತೋ ಇಲ್ಲವೋ ಎಂಬ ಬಗ್ಗೆ ರೈತರು ಆತಂಕಕ್ಕೆ ಒಳಗಾಗುವುದು ಬೇಡವೆಂದರು. ಕೃಷಿ ಮತ್ತು ಕೃಷಿ ಸಂಬಂಧಿತ ವಿವಿಧ ಇಲಾಖೆಗಳ ಕಾರ್ಯಕ್ರಮ, ಯೋಜನೆಗಳ ಮಾಹಿತಿಯನ್ನು ರೈತರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕೃಷಿ ಅಭಿಯಾನ ಪ್ರಚಾರ ಕೈಗೊಳ್ಳಲಾಗಿದೆ. ಅಭಿಯಾನದ ಪ್ರಚಾರ ವಾಹನವು ಕೃಷಿ ಇಲಾಖೆ ಹಾಗೂ ಕೃಷಿ ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಸಹಕಾರ ಮತ್ತು ಕಂದಾಯ ಇಲಾಖೆ ಸೇರಿ ವಿವಿಧ ಇಲಾಖೆಗಳಿಂದ ರೈತರಿಗೆ ಸಿಗುವ ಸೌಲಭ್ಯಗಳು ಕುರಿತು ಪ್ರಚಾರ ನಡೆಸಲಿದೆ. ಚಿತ್ರದುರ್ಗ ತಾಲೂಕು ಎಲ್ಲ ಗ್ರಾಮಗಳಲ್ಲಿ 10 ದಿನಗಳ ಕಾಲ ಸಂಚರಿಸಲಿದೆ ಎಂದು ಹೇಳಿದರು.

ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಪಿ.ರಮೇಶ್ ಕುಮಾರ್, ಇಕೆವೈಸಿ, ಮಣ್ಣು ಪರೀಕ್ಷೆ, ತೊಗರಿ, ಸೋಯಾಬಿನ್, ಕದರಿ ಲೇಪಾಕ್ಷಿ ಹೊಸ ತಳಿಯ ಮಾಹಿತಿ ನೀಡುವುದರ ಜೊತೆಗೆ ಹೊಸ ತಾಂತ್ರಿಕತೆ ಹಾಗೂ ಇಲಾಖೆಯ ಕಾರ್ಯಕ್ರಮಗಳ ಉಪಯೋಗವನ್ನು ರೈತರು ಪಡೆಯಲಿ ಎಂಬ ಉದ್ದೇಶದಿಂದ ಈ ವಾಹನವು ಸಂಚರಿಸಲಿದೆ ಎಂದರು.

ತಹಸೀಲ್ದಾರ್ ಸತ್ಯನಾರಾಯಣ, ಕೃಷಿ ಇಲಾಖೆ ಉಪನಿರ್ದೇಶಕರಾದ ಬಿ.ಎನ್. ಪ್ರಭಾಕರ್, ಶಿವಕುಮಾರ್, ಸಹಾಯಕ ಕೃಷಿ ನಿರ್ದೇಶಕ ಎನ್. ಚಂದ್ರಕುಮಾರ್, ಕೃಷಿ ಅಧಿಕಾರಿಗಳಾದ ಆಶಾರಾಣಿ, ಶರಣಪ್ಪ, ತಾಂತ್ರಿಕ ಅಧಿಕಾರಿ ಶ್ವೇತಾ, ತೋಟಗಾರಿಕೆ ಇಲಾಖೆಯ ಶಿವಕುಮಾರ್, ಪಶುಸಂಗೋಪನೆ ಇಲಾಖೆಯ ಡಾ.ಕುಮಾರ್, ರೈತ ಮುಖಂಡ ಬಸ್ತಿಹಳ್ಳಿ ಸುರೇಶ್‌ಬಾಬು ಇದ್ದರು.

ಕನ್ನಡಪ್ರಭ
ಜಾಹೀರಾತಿಗಾಗಿ ಸಂಪರ್ಕಿಸಿರಿ

ಸ್ಥಳ	ಹೆಸರು	ಮೊ. ನಂ
ಶಿವಮೊಗ್ಗ [illegible]	ಕಾರ್ತಿಕ್.ಸಿ.	9844580906
ದಾವಣಗೆರೆ ಚಿತ್ರದುರ್ಗ	ಸುಧೀಂದ್ರ	9844913226

ಕನ್ನಡಪ್ರಭ ಪಬ್ಲಿಕೇಷನ್ ಲಿಮಿಟೆಡ್
[illegible]
ಗೋಪಾಲ್.ಪಿ.ಬಿ.ಎಂ: 9242063228
Kpsmgsch@gmail.com

CHANGE OF NAME

I, SHARADA PRADEEPA, Previously Called SHARADA. R/O 11, Holagodu, Bheemanakere (Po)-577418. Hosanagara Taluk, Shimoga Dist. Karnataka State. have Changed My Name has SHARADA PRADEEPA Vide affidavit dated:08-06-2022 Sworn before notary M.Shivananda, Hosangara. Henceforth All My Transaction and Dealings Will be in My New Name SHARADA PRADEEPA.

CHANGE OF NAME

I, PRAVEEN KUMAR DSOUZA S/o Felix Dsouza, previously called PRAVEN KUMAR DSOUZA, residing at C/o Felix Dsouza, Kambalikoppa, S.N. Nagar, Sagar, Shivamogga - 577401 have changed my name as PRAVEEN KUMAR DSOUZA vide affidavit dated 13-06-2022 sworn before Notary R.B. Basavaraju, Shivamogga. Henceforth all my transactions & dealings will be in my correct name PRAVEEN KUMAR DSOUZA.

ICICI Home Finance
ಐಸಿಐಸಿಐ ಹೋಮ್ ಫೈನಾನ್ಸ್

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ – ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ – 400059, ಭಾರತ
ಶಾಖಾ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಆರ್‌ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ – 580029

[ನಿಯಮ 8(6)ಕ್ಕೆ ಪ್ರೊವಿಸೊ ಗಳನ್ನು ನೋಡಿರಿ]
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಿಗರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿದ್ದು ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆ ಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಚಂದ್ರಶೇಖರ ಪಾಟೀಲ (ಸಾಲಗಾರ) ಸುಮಾ ಬಿ ಬಿ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHSGA00001296541	ಸೈಟ್ ನಂ. 36 ಆಸ್ತಿ ಸಂಖ್ಯೆ. 6614 ಕೆಇಬಿ ರಸ್ತೆ ಹಿರೋ ಶೋರೂಮ್ ಹಿಂಭಾಗ, ಗೋವಿನಕೋವಿ 2 ನೇ ವಾರ್ಡ್ ಹೊನ್ನಾಳಿ ಟಿಕ್ಯೂ ದಾವಣಗೆರೆ ಜಿಲ್ಲೆ- 577217	ರೂ. 16,18,664/- (7ನೇ ಜೂನ್ 2022 ರಂದು ಇದ್ದಂತೆ)	ರೂ. 8,64,000/- ರೂ. 86,400/-	28ನೇ ಜೂನ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ರವರೆಗೆ	30ನೇ ಜೂನ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 3:00 ರವರೆಗೆ
2.	ಚಂದ್ರಶೇಖರ ಪಾಟೀಲ (ಸಾಲಗಾರ) ಸುಮಾ ಬಿ ಬಿ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHSGA00001298199	ಸೈಟ್ ನಂ. 38 ಕೆಇಬಿ ರಸ್ತೆ ಹೀರೋ ಶೋರೂಮ್ ಹಿಂದೆ ಗೋವಿನಕೋವಿ 2 ನೇ ವಾರ್ಡ್ ಹೊನ್ನಾಳಿ ಟಿ ಕ್ಯೂ ದಾವಣಗೆರೆ ಜಿಲ್ಲೆ- 577217	ರೂ. 16,16,560/- (7ನೇ ಜೂನ್ 2022 ರಂದು ಇದ್ದಂತೆ)	ರೂ. 8,64,000/- ರೂ. 86,400/-	28ನೇ ಜೂನ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ರವರೆಗೆ	30ನೇ ಜೂನ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 3:00 ರವರೆಗೆ
3.	ಮಂಜುನಾಥ್ ಸಿ ಯಾದವ್ (ಸಾಲಗಾರ) ರಾಧಾ ಎಸ್ (ಸಹ ಸಾಲಗಾರ) ಸಾಲದ ಖಾತೆ ಸಂಖ್ಯೆ. LHDVG00001296540	ಸೈಟ್ ನಂ.124, ಸರೋಜಾಬಾಯಿ ಕಲ್ಯಾಣ ಮಂಟಪದ ಹತ್ತಿರ, ಶಂಕರಲಾಲ್ ಲೇಔಟ್, ಚಿತ್ರದುರ್ಗ. 577502	ರೂ. 11,33,765/- (7ನೇ ಜೂನ್ 2022 ರಂದು ಇದ್ದಂತೆ)	ರೂ. 18,40,000/- ರೂ. 1,84,000/-	28ನೇ ಜೂನ್ 2022 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ರವರೆಗೆ	30ನೇ ಜೂನ್ 2022 ರಂದು ಮಧ್ಯಾಹ್ನ 02:00 ರಿಂದ ಮಧ್ಯಾಹ್ನ 3:00 ರವರೆಗೆ

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯ **ವೆಬ್‌ಸೈಟ್‌ನ** ಮೂಲಕ **(URL Link- eacutions.samil.in)** ನಡೆಯುತ್ತದೆ ಮತ್ತು ಟೆಂಡರ್ ದಾಖಲೆಯಲ್ಲಿನ ಷರತ್ತುಗಳು ಮತ್ತು ನಿಬಂಧನೆಗಳಂತೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕದಂದು **29ನೇ ಜೂನ್, 2022ರ ಸಂಜೆ 5.00 ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ) (ಕಾಲಂ ಸಂಖ್ಯೆ ಎಫ್‌ರಲ್ಲಿ ನಮೂದಿಸಿದಂತೆ) ಯೊಂದಿಗೆ ತಮ್ಮ ಆಫರ್‌ಗಳನ್ನು ಮೊಹರಾದ ಲಕೋಟೆಯಲ್ಲಿಟ್ಟು ''ಭದ್ರತಾ ಆಸ್ತಿ ಖರೀದಿಗಾಗಿ ಆಫರ್'' ಎಂಬ ಮೇಲ್ಬರಹ ಮಾಡಿ **ಐಸಿಐಸಿಐ ಬ್ಯಾಂಕ್ ಲಿಮಿಟೆಡ್, 2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ – 580029** ಇವರಿಗೆ **29ನೇ ಜೂನ್ 2022ರ ಸಂಜೆ 05.00** ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ ಸಲ್ಲಿಸಬೇಕು. ಇಎಂಡಿಗಾಗಿನ ಡಿಡಿ/ ಪಿಒ ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ **ಐಸಿಐಸಿಐ ಬ್ಯಾಂಕ್ ಲಿಮಿಟೆಡ್, 2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123,** ರವರ ಪದನಾಮಕ್ಕೆ ಪಾವತಿಯಾಗುವಂತಿರಬೇಕು. ಅರ್ನೆಸ್ಟ್ ಮನಿ ಡೆಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಪರವಾಗಿರಬೇಕು. ಹರಾಜು ಹುಬ್ಬಳ್ಳಿಯಲ್ಲಿ ಪಾವತಿಸಬೇಕು.

ಪರಿಶೀಲನೆ, ಹರಾಜು ಅಥವಾ ಟೆಂಡರ್‌ಗಳ ಸಲ್ಲಿಕೆಯ ನಿಯಮಗಳು ಮತ್ತು ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಅನ್ನು 7021072869 ನಲ್ಲಿ ಸಂಪರ್ಕಿಸಿ.

ಯಾವುದೇ ಹೆಚ್ಚಿನ ಕಾರಣಗಳನ್ನು ಒದಗಿಸದೆಯೇ ಯಾವುದೇ ಅಥವಾ ಎಲ್ಲಾ ಬಿಡ್ಡಗಳನ್ನು ತಿರಸ್ಕರಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು https://www.icicihfc.com/ ಗೆ ಭೇಟಿ ನೀಡಿ

ದಿನಾಂಕ : ಜೂನ್ 15, 2022
ಸ್ಥಳ : ದಾವಣಗೆರೆ, ಚಿತ್ರದುರ್ಗ

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ವಿದ್ಯಾರ್ಥಿಗಳಿಗೆ ಸೌಲಭ್ಯ | **ಹೊಳಲ್ಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ರೋಟರಿ ಕ್ಲಬ್ ಉಚಿತ ಕಂಪ್ಯೂಟರ್ ವಿತರಣೆ**

ಶಿಕ್ಷಣಕ್ಕಿರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ: ಶಾಸಕ

- **ಕನ್ನಡಪ್ರಭವಾರ್ತೆ** ಹೊಳಲ್ಕೆರೆ

ಶಿಕ್ಷಣಕ್ಕೆ ಇರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ ಎಂದು ಶಾಸಕ ಎಂ. ಚಂದ್ರಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಳಲ್ಕೆರೆ ರೋಟರಿ ಕ್ಲಬ್ ವತಿಯಿಂದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಉಚಿತವಾಗಿ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಈ ಕಾಲೇಜಿನಲ್ಲಿ ಒಟ್ಟು 760 ವಿದ್ಯಾರ್ಥಿಗಳಿದ್ದು ಅದರಲ್ಲಿ 520 ವಿದ್ಯಾರ್ಥಿನಿಯರು ಇರುವುದು ವಿಶೇಷ. ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಒತ್ತು ನೀಡಲಾಗಿದೆ. ಈ ಕಾಲೇಜನ್ನು ಮೈಸೂರು ಮಹಾರಾಜ ಕಾಲೇಜಿನ ಮಾದರಿಯಲ್ಲಿಯೇ ನಿರ್ಮಾಣ ಮಾಡಲಾಗಿದೆ. ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ್ದು ಇದಕ್ಕೆ ಈ ಕಾಲೇಜಿನ 300 ವಿದ್ಯಾರ್ಥಿಗಳು ಸೇರಿರುವುದು ಶ್ಲಾಘನೀಯ ಎಂದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಹೊಂದಬೇಕೆಂದು ಸರ್ಕಾರ ಆನೇಕ ಮಹತ್ವಾಕಾಂಕ್ಷಿ ಯೋಜನೆ ರೂಪಿಸಿದೆ. ಹೊಳಲ್ಕೆರೆ ತಾಲೂಕು ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದ ಎಲ್ಲ ಶಾಲಾ ಕಾಲೇಜುಗಳಿಗೆ ಕಟ್ಟಡ ನಿರ್ಮಿಸಲಾಗುವುದು. ಹೊಳಲ್ಕೆರೆ ಪಟ್ಟಣದ ಸರ್ಕಾರಿ ಎಂ.ಎಂ.ಪ್ರೌಢ ಶಾಲೆಯಲ್ಲಿ ಆಂಗ್ಲ ಮಾಧ್ಯಮ ಎಲ್‌ಕೆಜಿಯಿಂದ ಹಿಡಿದು ಪಿಯುಸಿಯವರೆಗೂ ವಿದ್ಯಾಭ್ಯಾಸವಿದೆ. ಈ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್, ಎಸಿ, ಗುಣಮಟ್ಟದ ಕುರ್ಚಿಗಳು ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಲಾಗಿದೆ. ಅಲ್ಲದೆ ಗುಣಮಟ್ಟದ ಶಿಕ್ಷಕರನ್ನು ನೇಮಿಸಲಾಗಿದೆ ಎಂದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ. ರಮೇಶ್ ಸಭೆ ಅಧ್ಯಕ್ಷತೆ ವಹಿಸಿ, ಕಾಲೇಜಿಗೆ ಅಗತ್ಯ ಸೌಲಭ್ಯ ನೀಡುವುದಾಗಿ ಶಾಸಕ ಎಂ. ಚಂದ್ರಪ್ಪ ಹೇಳಿದ್ದಾರೆ. ಅವರಿಗೆ ಕಾಲೇಜುವತಿಯಿಂದ ಅಭಿನಂದನೆ ಸಲ್ಲುಸುತ್ತೇನೆ ಎಂದು ಹೇಳಿದರು.

ರೋಟರಿ ಕ್ಲಬ್ ಮಾಜಿ ಅಧ್ಯಕ್ಷ ಎಚ್.ಪಿ. ಸುದರ್ಶನ್‌ಕುಮಾರ್ ಪ್ರಸ್ತಾವಿಕವಾಗಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗೆ ಕಂಪ್ಯೂಟರ್ ಜ್ಞಾನ ಬಹಳ ಮುಖ್ಯ ಆದ್ದರಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 35 , ಮಲ್ಲಾಡಿಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 10, ಚಿತ್ರಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 10 ಒಟ್ಟು 55 ಕಂಪ್ಯೂಟರ್ ರೋಟರ್‌ಕ್ಲಬ್ ವತಿಯಿಂದ ಶಾಸಕರ ಸಮ್ಮುಖದಲ್ಲಿ ವಿತರಿಸಿದ್ದೇವೆ ಎಂದರು.

ರೋಟರಿ ಅಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಹರೀಶ್, ಮಲ್ಲಾಡಿಹಳ್ಳಿ ಕಾಲೇಜು ರವಿ, ರೋಟರಿ ಸದಸ್ಯರಾದ ರಾಜಪ್ಪ, ಎ.ಸಿ. ಗಂಗಾದರಪ್ಪ, ಶಿವಲಿಂಗಪ್ಪ, ಎ.ವಿ ರಾಜು, ಗೀತಮ್ಮ, ಇನ್ನರ್ ವ್ಹೀಲ್ ಅಧ್ಯಕ್ಷೆ ಸವಿತಾ ಪ್ರಕಾಶ್, ಕಾರ್ಯದರ್ಶಿ ಮಮತಾ ಗುರುಶಾಂತಪ್ಪ, ಕಾಲೇಜು ಸಿಬ್ಬಂದಿ ಉಪಸ್ಥಿತರಿದ್ದರು.

ಹೊಳಲ್ಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋಟರಿ ಕ್ಲಬ್‌ನಿಂದ ವಿದ್ಯಾರ್ಥಿಗಳಿಗೆ ಉಚಿತ ಕಂಪ್ಯೂಟರ್ ವಿತರಿಸುವ ಕಾರ್ಯಕ್ರಮಕ್ಕೆ ಶಾಸಕ ಎಂ. ಚಂದ್ರಪ್ಪ ಚಾಲನೆ ನೀಡಿದರು.